2

ನಾರೀಶ್ವರರು

(ಏಕಾಂಕ ಪ್ರಹಸನ)

ಪ್ರಹಸನ ರಚಯಿತರು:

ಕುಡ್ಪಿ ವಾಸುದೇವ ಶೆಣೈ,

ಮಂಗಳೂರು.

1954.

ಒಂದಾಣ್ ಮಾಲೆ

ಒಂದ...

ತಾ. **19-9-1954**ನೇ ರ...

ಪ್ರಭಾತ...

—ವಾರಪತ್ರಿಕೆಯ ಬಿಡಿ ಸಂಚಿಕೆಯ ಬೆ...

ಒಂದೇ ಆಣೆ!

ಆದರೆ, ಎಂದಿನಂತೇ ಹನ್ನೆರಡು ಪುಟಗಳು,
ಕೆಲವೊಮ್ಮೆ ಹೆಚ್ಚು ಪುಟಗಳು.

ಸಣ್ಣ ಕತೆಗಳು, ವಿನೋದ ಕಥೆಗಳು, ದೇಶ-ವಿದೇಶ ವಾರ್ತೆಗಳು, ಸ್ಥಳೀ... ವಾರ್ತೆಗಳು, ವಿಜ್ಞಾನ ವಿಷಯಗಳು, ವಿಶೇಷ ಲೇಖನಗಳು, ಜ್ಯೋತಿಷ್ಯ... ಭವಿಷ್ಯ, ವಾರದ ಪಂಚಾಂಗ ಇತ್ಯಾದಿ ಯಾವತ್ತೂ ವಿಷಯಗಳಿರುವವು.

ವಾರ್ಷಿಕ ಚಂದಾ (ವಿಶೇಷಾಂಕ ಸಹಿತ)

ಸ್ಥಳೀಯರಿಗೆ ರೂ. **3—8—0.**
ಪರಸ್ಥಳೀಯರಿಗೆ ರೂ. **4—8—0.**
(ಅಂಚೆವೆಚ್ಚ ಸೇರಿ)

ಬಿಡಿಪ್ರತಿಗಳು ಎಲ್ಲ ನ್ಯೂಸ್ ಏಜಂಟರಲ್ಲಿ ದೊರೆವುವು.

ಅಥವಾ

ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

(ವಿ. ಸೂ.—ಈಗ, ರೂ. 6 ತೆತ್ತವರ ಚಂದಾ ಮೊಬಲಗನ್ನು, ಇನ್ನುಳಿದ ಅವರ ಚಂದಾ ಅವಧಿಯನ್ನು ತಕ್ಕಷ್ಟು ಹೆಚ್ಚಿಸಿ, ಸರಿಪಡಿಸಲಾಗುವುದು.)

ನಾರೀಶ್ವರರು

ಸೀತಾರಾಮರಾಯರೂ ನರ್ಸಿಂಗರಾಯರೂ ಸ್ನೇಹಿತರು. ಒಬ್ಬರು ಹೆಂಡತಿಯನ್ನು ಅಂಕೆಯಲ್ಲಿಟ್ಟು ಆಳುವವರು, ಮತ್ತೊಬ್ಬರು ಹೆಂಡತಿಗೆ ಹೆದರಿಯೇ ಜೀವನ ಕಳೆದವರು. ಸೀತಾರಾಮರಾಯರು ನರ್ಸಿಂಗರಾಯರಿಗೆ ಧೈರ್ಯ ಹೇಳಿ, ಹೆಂಡತಿಯನ್ನು ಪಳಗಿಸುವ ವಿಧಾನ ಕಲಿಸಿಕೊಡುವರು. ಸೀತಾರಾಮ ರಾಯರ ಹೆಂಡತಿ—ಗಂಡನಿಗೆ ಹೆದರಿಯೇ ಇದ್ದು, ಅನೇಕ ಹೆಂಗಸರು ಗಂಡನನ್ನು ಅಂಕೆಯಲ್ಲಿಟ್ಟುಕೊಂಡು ಹೇಗೆ ಆಳುವರೆಂದು ಆಶ್ಚರ್ಯಪಡುತ್ತಿದ್ದ ವೇಳೆಗೆ, ನರ್ಸಿಂಗರಾಯರ ಹೆಂಡತಿಯ ಆಶೀರ್ವಾದವಾಗುವುದು. ಎರಡೂ ಪರಸ್ಪರ ವಿರುದ್ಧ ಶಕ್ತಿಗಳು ಘರ್ಷಿಸುವುವು. ಎರಡೂ ಸ್ಫೋಟನಗಳಾಗುವುವು. ಆದರೆ, ಕೃತಕ ಅಧ್ಯಾಪನದಿಂದ ಯಾರ ವ್ಯಕ್ತಿತ್ವವೂ ತಿಲಮಾತ್ರ ಬದಲಾಗುವುದಿಲ್ಲ.

ಸೀನ್ ೧.

[ಸೀತಾರಾಮರಾಯರ ಮನೆಯ ಕೊಠಡಿ. ಸೀತಾರಾಮರಾಯರೂ, ಅವರ ಸ್ನೇಹಿತ ನರ್ಸಿಂಗರಾಯರೂ ಕುಳಿತಿರುವರು.]

ಸೀತಾರಾಮ: ಸಗ್ಣಾ !

ಸಗುಣಾ: (ಒಳಗಿನಿಂದ)—ಬಂದೆ! (ಕೂಡಲೇ ಬರುವಳು.)

ಸೀತಾರಾಮ: ಸಗ್ಣಾ, ಎರಡು ಕಪ್ ಚಹಾ ತಾ! ಸ್ಪೆಶಲ್, ಏನೂ!

ಸಗುಣಾ: ಮಾಡಿಟ್ಟಿದ್ದೇನೆ. ಈಗ ತಂದೆ! (ಹೋಗುವಳು.)

ನರ್ಸಿಂಗ: ಸೀತಾರಾಮರಾಯರೇ, ಅದೇನು ಹೆಸರು, ಸಗ್ಣಾ?

ಸೀತಾರಾಮ: ಸಗುಣಾ ಅಂತ! ಪ್ರೀತಿಯಿಂದ ಸಗ್ಣಾ ಅನ್ನೋದು. ಪ್ರೀತಿ ಹೆಚ್ಚಾದರೆ ಸಗ್ಣೀ ಎನ್ನೋದೂ ಉಂಟು. ಕೋಪ ಬಂದರೆ ಮಾತ್ರ ಸಗುಣಾ ಎನ್ನುತ್ತೇನೆ.

ನರ್ಸಿಂಗ: ನಿಮಗೆ ಹೆಂಡತಿಯ ಮೇಲೆ ಪ್ರೀತಿಯೂ ಇದೆ, ಕೋಪವೂ ಇದೆಯೆ?

ಸೀತಾರಾಮ: ಇದೆ. ಅಷ್ಟು ಮಾತ್ರವಲ್ಲ. ಕರುಣೆಯೂ ಇದೆ. ಪ್ರೀತಿ-ಕರುಣೆ-ಕೋಪ-ಇವು ಮೂರು ಇದ್ದರೆ ಹೆಂಡಿರು ಯಾವಾಗಲೂ ವಿಧೇಯರು. (ಚಹಾ ಬರುವುದು. ಇಬ್ಬರೂ ಕುಡಿಯುವರು.)

ನರ್ಸಿಂಗ: (ನಿಟ್ಟುಸಿರುಬಿಡುತ್ತ)- ಸೀತಾರಾಮರಾಯರೇ, ನೀವು ಬಹು ಭಾಗ್ಯಶಾಲಿಗಳು. ಎಷ್ಟೊಳ್ಳೆ ಹೆಂಡತಿಯಪ್ಪಾ. 'ಚಾ ತಾ' ಎನ್ನು ವುದರೊಳಗೆ 'ಮಾಡಿಟ್ಟಿದ್ದೇನೆ, ತಂದೆ' ಎನ್ನುತ್ತಾಳೆ. 'ತಂದೆ' ಎನ್ನು ವಾಗಲೇ ತಂದೂ ಆಯಿತು. ನನ್ನ ಹೆಂಡತಿಗೆ ಚಾ ಮಾಡಲಿಕ್ಕೆ ಬರುತ್ತದೆ; ಆದರೆ, ಮಾಡುವುದಿಲ್ಲ. ಯಾರಾದರೂ ಚಾ ಮಾಡಿದರೆ ತರಲಿಕ್ಕೂ ಬರು ತ್ತದೆ; ಆದರೆ, ತರುವುದಿಲ್ಲ.

ಸೀತಾರಾಮ: ಮೈಯಲ್ಲಿ ಅಸೌಖ್ಯ ಇರಬಹುದು.

ನರ್ಸಿಂಗ: ಸೌಖ್ಯ ಇದ್ದಾಳೆ. ಅವಳ ಊಟ—ಗೀಟ ಕ್ರಮದಲ್ಲಿ ನಡೆಯುತ್ತಿದೆ. ಆದರೆ, ಅವಳು ಚಹಾ ತರುವುದಿಲ್ಲವೆಂದು ನಾನು ಹೇಳ ದಿದ್ದುದರಿಂದಲೋ ನಾನು ಹೇಳುವ ಅಭ್ಯಾಸವಿಲ್ಲದೆ ಆಕೆಗೆ ತರುವ ಅಭ್ಯಾಸವೇ ಆಗದುದರಿಂದಲೇ ಏನೋ ಒಂದು ರೀತಿ ಸಂಸಾರ ಸಾಗಿದೆ. ನಿಮ್ಮೊಡನೆ ಸತ್ಯ ಹೇಳಬೇಕೆ?

ಸೀತಾರಾಮ: ವಿಶೇಷ?

ನರ್ಸಿಂಗ: ಯಾರೊಡನೆಯೂ ಹೇಳಬೇಡಿ. ಅವಳು ನನ್ನ ಮಾತನ್ನೇ ಕೇಳುವುದಿಲ್ಲ. ವಿಧೇಯತೆ ಎಂಬುದೇ ಇಲ್ಲ. ಏನಯ್ಯಾ ಇದು? ಎಲ್ಲರೂ ಮದುವೆ ಮಾಡಿಕೊಂಡಂತೆ ನಾನೂ ಮಾಡಿಕೊಂಡುದು.

ಸೀತಾರಾಮ: ಅದೊಂದು ರಹಸ್ಯವೆ? ನೋಡಿ, ಜಗತ್ತಿನಲ್ಲಿರೋದು 'ಸಾಯನ್ಸ್! ಸಾಯನ್ಸ್' ಮಾತ್ರ! ನಿಮ್ಮಲ್ಲೇನೊ ಕಡಿಮೆ ಇದೆ.

ನರ್ಸಿಂಗ: ಕಡಿಮೆಯೆಂದರೆ ನನ್ನ ದೇಹ ಸ್ವಲ್ಪ ಸಣ್ಣದು. ನಮ್ಮ ವಳದ್ದು ನಾಲ್ಕಿಂಚು ಎತ್ತರ!

ಸೀತಾರಾಮ: ಹಂ! ಅಸಮತೆ! ವೈಷಮ್ಯ! ಇರಲಿ, ಗಾಬರಿಪಡಬೇಡಿ!

ನರ್ಸಿಂಗ: ಗಾಬರಿಯಿಲ್ಲವೆನ್ನಿ. ಈಗ ನೀವಂದುದೇನು? ಪ್ರೀತಿ— ಕರುಣೆ—ಕೋಪ ಮೂರೂ ಇರಬೇಕೆ? ಪ್ರೀತಿ ಒಂದೇ ಸಾಲದೇ?

ಸೀತಾರಾಮ: ಸಾಕು. ಆದರೆ. ಮೂರೂ ಇದ್ದರೆ ಚಲೋದು. ಪ್ರೀತಿ ವಿಶೇಷವಾದರೆ-ನಾನು ಮೊದಲೇ ಹೇಳಿದ್ದೆನಲ್ಲ-ಸಗ್ಣಾ ಎಂಬುದು ಸಗ್ಣೀ ಎಂದು ರೂಪಾಂತರಗೊಳ್ಳುವುದು. ನಿಮ್ಮ ಹೆಂಡತಿಯ ಹೆಸರೇನು- ಪಾರ್ವತಿಯೆ?-ಪ್ರೀತಿಯಿಂದ ಪಾರೂ ಎನ್ನುವಿರಿ. ಪ್ರೀತಿ ಹೆಚ್ಚಾದರೆ ಪಾತೂ ಎನ್ನಬಹುದು. ನೋಡಿ, ಪ್ರತಿಯೊಂದೂ, ವಿಜ್ಞಾನ ರೀತಿಯಲ್ಲೇ

ಸಾಗಬೇಕು. ಪ್ರೀತಿ ಮಾತ್ರ ಹೆಚ್ಚಾದರೆ ಮನುಷ್ಯನು ಪ್ರೀತಿಯು ಹೊರತು ಮತ್ತೇನನ್ನೂ ಕೊಡಲಾರನು. ಆಗ ಕರುಣೆ ಬೇಕು; ಸರಿಹೋಗುತ್ತದೆ. ಕರುಣೆ ಹೆಚ್ಚಿದಾಗ, ಬುದ್ಧಿಯಿದ್ದ ಹಾಗೂ ಬುದ್ಧಿ ಇಲ್ಲದ ಹೆಂಗಸರು ಕೊಟ್ಟಷ್ಟೂ ಸಾಲದೆನ್ನುವ ಸ್ಥಿತಿಗೆ ಬರುತ್ತಾರೆ. ಆಗ ಕೋಪ ಬೇಕು.

ನರ್ಸಿಂಗ: ಸೀತಾರಾಮರಾಯರೇ, ನೀವು ಎಷ್ಟು ಜಾಣರಪ್ಪ! ನನಗೆ ನೋಡಿ, ಹೆಂಡತಿಯು ಮೇಲೆ ತುಂಬಾ ಪ್ರೀತಿ; ಅವಳಿಗೆ ನನ್ನ ಮೇಲೆ ತುಂಬಾ ಕೋಪ. ಅವಳನ್ನು ನೋಡಿದ ಕೂಡಲೇ ನಾನು ಹೆದರುವುದೊಂದೇ! ನಿಮ್ಮ ಹೆಂಡತಿ—ಏನು ಒಳ್ಳೆ ಜೀವ!—ಭಾಗ್ಯಲಕ್ಷ್ಮಿ!—ನಿಮ್ಮಾಣೆ,- ನಿಮ್ಮ ಹೆಂಡತಿಯು ವಿಧೇಯತ್ವ ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ.

ಸೀತಾರಾಮ: ಅಳಬೇಡಿರಿ. 'ಅನ್‌ಸಾಯಂಟಿಫಿಕ್' ಆಗುತ್ತದೆ. ನನ್ನ ಲೆಕ್ಕ ಸರೀ ಇದೆ. ಅಂತೇ ಆಕೆಯು ವಿಧೇಯತ್ವದಲ್ಲಿ ಕುಂದಿಲ್ಲ.

ನರ್ಸಿಂಗ: ನನ್ನ ಹೆಂಡತಿಯು ಅವಿಧೇಯತ್ವ ನೋಡಿದರೆ ಊರೇ ಬಿಡೋಣವೆನಿಸುತ್ತದೆ.

ಸೀತಾರಾಮ: ಬಿಡಬೇಡಿರಿ. ನೋಡಿ,- ಇಲ್ಲಿ ಪುನಃ ವಿಜ್ಞಾನವೇ ಮುಖ್ಯ. ಲೆಕ್ಕ ತಪ್ಪಬಾರದು; ಸಂಸಾರವು ಸುಖದಲ್ಲಿ ಸಾಗುತ್ತದೆ.

ನರ್ಸಿಂಗ: ಎಂತಹ ಸುಖವೊ! ಅವಳ ಕೈಹಿಡಿದ ದಿನದಿಂದ ಈ ನಿಮಿಷದ ವರೆಗೆ ನನಗೆ ಅವಳನ್ನು ನೋಡಿ ಹೆದರುವುದೇ ಒಂದು ಕೆಲಸ! ನೀವು ಲೆಕ್ಕ ಹೇಗೆ ಮಾಡುವಿರೊ!

ಸೀತಾರಾಮ: ನನ್ನ ಲೆಕ್ಕ ಸುಲಭ. ನೋಡಿ—ಟೈಂಟೇಬಲ್ ಪ್ರಕಾರ ಬೆಳಗ್ಗೆ ಎಂಟರಿಂದ ಹನ್ನೆರಡರವರೆಗೆ ಪ್ರೀತಿ; ಎರಡರಿಂದ ಆರರ ತನಕ ಕರುಣೆ; ಆರರಿಂದ ಹತ್ತರವರೆಗೆ ಕೋಪ; ಮತ್ತೆ ಪ್ರೀತಿ; ಮತ್ತೆ ಪುನಃ ಕರುಣೆ. ಸೂರ್ಯನಂತೆ ಲೆಕ್ಕ ತಪ್ಪುವುದೇ ಇಲ್ಲ. ಹೊತ್ತಿಗೆ ಸರಿಯಾಗಿ ಊಟ. ಹೊತ್ತಿಗೆ ಸರಿಯಾಗಿ ಪ್ರೇಮ—ಇವು ಇದ್ದರೆ ನರಸಿಂಗ ರಾಯರೆ, ಭೂಲೋಕವು ಸ್ವರ್ಗ!

ನರ್ಸಿಂಗ: ಈಗ ನಾನು ಏನು ಮಾಡಬೇಕೆಂದು ನಿಮ್ಮ ಸೂಚನೆ?

ಸೀತಾರಾಮ: ನೀವೊ? ನನ್ನ ಹಾಗೇ ಮಾಡಬೇಕು. ನಿಮಗೆ ಪ್ರೇಮಮಾಡಲಿಕ್ಕೆ ಬರುತ್ತದೆ. ಮತ್ತೆ ಕರುಣೆ ತೋರಿಸಿರಿ; ಆ ಮೇಲೆ ಕೋಪ.

ನರ್ಸಿಂಗ: ನಾಲ್ಕು ಗಂಟೆ ಪ್ರೇಮ ಮಾಡ್ತೇನೆಂದಿಟ್ಟು ಕೊಳ್ಳಿ; ನಾಲ್ಕು ಘಂಟೆ ಕರುಣೆಯನ್ನೂ ತೋರಿಸ್ತೇನೆ. ಆದರೆ, ಕೋಪ? (ನಿಟ್ಟುಸಿರು.)

ಸೀತಾರಾಮ: ಅಹುದು. ನಾಲ್ಕು ಘಂಟೆ ಕೋಪ ಮಾಡಲಿಕ್ಕೆ ಸ್ವಲ್ಪ ಆಕ್ಷೇಪ. ನೀವು ಹೊಸಬರಾದ್ದರಿಂದ ಐದೈದೇ ನಿಮಿಷ ಇಟ್ಟುಕೊಳ್ಳಿ.

ನರ್ಸಿಂಗ: ಸಾಕೇ?

ಸೀತಾರಾಮ: ಮೊದಲಿನ ದಿವಸಕ್ಕೆ ಅಷ್ಟೇ ಸಾಕು. ಆ ಮೇಲೆ ಐದೈದೇ ನಿಮಿಷ ಹೆಚ್ಚಿಸುತ್ತ ಹೋಗಿರಿ. ಎರಡು ತಿಂಗಳೊಳಗೆ ನನ್ನ ಸ್ಥಿತಿಗೇ ಬರುವಿರಿ.

ನರ್ಸಿಂಗ: ಹಾಗೆ ಮಾಡಿದರೆ ಮೋಸ ಬಾರವಷ್ಟೆ?

ಸೀತಾರಾಮ: ಒಂದು ಚೂರಿಲ್ಲ. ಬಂದರೆ, ನನ್ನಲ್ಲಿಗೆ ಬನ್ನಿ.

ನರ್ಸಿಂಗ: ಹೆಂಡಂದಿರನ್ನು ಆಳುವ ಶಕ್ತಿಗಳು ಇವು—ಅಲ್ಲವೇ? ಪ್ರೇಮ—ಕರುಣೆ—ಮೋಸ! ಐದೈದು ನಿಮಿಷ!

ಸೀತಾರಾಮ: ಮೋಸವಲ್ಲ, ಕೋಪ. ಒಂದರಲ್ಲಿಯೂ ಒಂದು ಚೂರೂ ಕಡಿಮೆಯಾಗಬಾರದು.

ನರ್ಸಿಂಗ: ನಿಜ! (ಹೋಗಿ, ಪುನಃ ಬಂದು ನಿಟ್ಟುಸಿರಿಟ್ಟು) ಹೆಂಡತಿಯನ್ನು ಗೆದ್ದರೆ ಜಗತ್ತನ್ನೇ ಗೆದ್ದಂತೆ! ನಿಮ್ಮ ಅಭಿಪ್ರಾಯವೇನು?

ಸೀತಾರಾಮ: ಮತ್ತೆ ಸ್ವರ್ಗವನ್ನು ಗೆದ್ದಂತೆ! (ನರ್ಸಿಂಗರಾಯರು ಸಂತೋಷದಿಂದ ಹಸ್ತಲಾಘವವಿತ್ತು ಹೋಗುವರು.)

ಸೀನ್ ೨.

ಸೀತಾರಾಮರಾಯರ ಹೆಂಡತಿ

ಸಗುಣಾ: (ಸ್ವಗತ)—ಅಪ್ಪ, ನರ್ಸಿಂಗರಾಯರು! ಹೆಂಡತಿಗೆ ಹೆದರುವುದೇ ಅವರ ಕೆಲಸವಂತೆ! ಆಶ್ಚರ್ಯ ಕಾಣುತ್ತದೆ. ನಾನು ಗಂಡನಿಗೆ ಹೆದರಿ, ಹೆದರಿ ಎಲುಬು ಮಾತ್ರ ಉಳಿದಿದೆ. ಗಂಡನನ್ನು ಗೆದ್ದ ಆ ಪಾರ್ವತಿಯನ್ನು ನಾನು ನೋಡಲೇ ಬೇಕು; ಗಂಡನನ್ನೂ ಗೆದ್ದು, ಆಳುವವರಿರುವರೇ! ಆ ಶಕ್ತಿಯಾವುದು? ಅದ್ಭುತ ಇರಬೇಕು! ನರ್ಸಿಂಗರಾಯರು ಚಹಾ ತಾ ಎಂದರೆ ತರುವುದಿಲ್ಲವಂತೆ ಪಾರ್ವತಿ! ಅವರು

ಸುಮ್ಮನೆ ಕೇಳಿಕೊಂಡು ಬಿದ್ದಿದ್ದಾರಲ್ಲ. ನಮ್ಮವರಿಗೆ ನಾನು ಹಾಗೆ ಹೇಳಿದರೆ ಮನೆಯನ್ನೇ ಸುಟ್ಟಾರು. ಇಲ್ಲ—ಆ ಭಾಗ್ಯಲಕ್ಷ್ಮಿಯನ್ನು—ನಾರೀರತ್ನವನ್ನು—ನಾನು ನೋಡಲೇಬೇಕು. ಈಗ ನಮ್ಮವರು ಮನೆಯಲ್ಲಿಲ್ಲದ ಸಮಯ ಅನುಕೂಲವಾಗಿ ಘಟಿಸಿದೆ.

ಸೀನ್ ೩.

[ಪಾರ್ವತಿಯ(ನರಸಿಂಗರಾಯರ)ಮನೆ. ಪಾರ್ವತಿಯು ಇಝಿಚೆಯರಿನಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದಾಳೆ. ಸಗುಣಾ ಬರುವಳು.]

ಸಗುಣಾ: ಏನು ಪಾರ್ವತಿ, ಕ್ಷೇಮವೇ? ನಾನು ಬಂದೆ.

ಪಾರ್ವತಿ: ಓಹೋ—ಅಪರೂಪ! ಬಾಮ್ಮ ಬಾ. ಸಾಲೆಯಲ್ಲಿದ್ದೆವು. ಸಾಲೆಯಲ್ಲಿ ಪ್ರಾಣದ ಗೆಳತಿಯರಾಗಿದ್ದರೂ ಈಗ ಒಬ್ಬರನ್ನೊಬ್ಬರು ಮರೆತೇ ಹೋಗುವಷ್ಟಕ್ಕಾಯಿತಲ್ಲ. ಎಷ್ಟು ವರ್ಷವಾಯಿತು ಸಗುಣಾ! ನಿನಗೆ ಮದುವೆಯೂ ಆಯಿತು.

ಸಗುಣಾ: ನಿನಗೂ ಆಯಿತು. (ಇಬ್ಬರೂ ನಗುವರು.)

ಪಾರ್ವತಿ: ಆಹುದು, ನನಗೂ ಆಯಿತು. ಒಂದು ಮದುವೆ ಬೇಕಷ್ಟೆ ಹುಡುಗಿಯರಿಗೆ! ಏನು ಮದುವೆಯೊ? ಒಂದು ದಿನವೂ ಸುಖವಿಲ್ಲ. ಅಲ್ಲ, ಈ ಮದುವೆಯೆಂಬುದನ್ನು ಮಾಡಿದವರು ಯಾರು ಸಗುಣಾ?

ಸಗುಣಾ: ಗಂಡುಸರೇ, ಮತ್ತೆ ಯಾರು?

ಪಾರ್ವತಿ: ನಿಜ, ಈ ಗಂಡುಸರಿಗೆ ಮದುವೆಯಾಗದಿದ್ದರೆ ಗತ್ಯಂತರವೇ ಇಲ್ಲ. ಈ ಪುರುಷಜಾತಿ ಇಲ್ಲದಿದ್ದರೇನಾಗುತ್ತಿತ್ತೊ!

ಸಗುಣಾ: ಮದುವೆಗಳೇ ಆಗುತ್ತಿರಲಿಲ್ಲ. ಮತ್ತೆ ನಮಗೆ, 'ನೀನೆಲ್ಲಿಗೆ ಹೋಗಿದ್ದೆ? ಏಕೆ ಹಾಗೆ ನೋಡಿದೆ–ಏಕೆ ಕೂತೆ?'–ಎಂದು ಕೇಳುವವರಿರುತ್ತಿರಲಿಲ್ಲ.

ಪಾರ್ವತಿ: ಕೂತರೆ ಸಂಶಯ! ಎದ್ದರೆ ಸಂಶಯ! ನಮ್ಮನ್ನಾಳಬೇಕೆಂಬ ಒಂದೇ ಹಂಬಲ!

ಸಗುಣಾ: 'ಚಾ ತಾ', 'ಕಪ್ ತೊಳೆ,' 'ಪದಾರ್ಥವೇನು'? 'ಉಪ್ಪು ಕಡಿಮೆ ಏಕೆ?' ಏನಾಟ!

ಪಾರ್ವತಿ: ಕಪ್ಪು? ಉಪ್ಪು? ನಮ್ಮವರು ಹಾಗೆ ಹೇಳಿದರೆ ಸೀಳ್ಯೇನು! ಹೆಂಡತಿಯಾಗೋದು ಚಹಾ ತಯಾರಿಸಿ ಕೊಡಲಿಕ್ಕೇನು?

ಸಗುಣಾ: ನೀನು ಪುಣ್ಯವಂತೆ ಪಾರ್ವತಿ! ನಿನಗೆ ನಿಮಿಷಕ್ಕೊಮ್ಮೆ ಚಾ ಮಾಡಲಿಕ್ಕಿಲ್ಲ-ಗಂಡನಿಗೆ ಹೆದರಲಿಕ್ಕೂ ಇಲ್ಲ.

ಪಾರ್ವತಿ: ಚಾ ಮಾಡಲಿಕ್ಕೂ ಗಂಡನಿಗೆ ಹೆದರಲಿಕ್ಕೂ ನನಗೆ ಪುರುಸೊತ್ತು ಬೇಕಲ್ಲ!

ಸಗುಣಾ: ಪಾರ್ವತಿ! ನೀನು ನಿಜವಾಗಿಯೂ ಭಾಗ್ಯಶಾಲಿ, ನಿನಗೆ ಹೇಳಲು ಮರೆತೆ. ನಿನ್ನ ಗಂಡ ನಮ್ಮ ಮನೆಗೆ ಈ ದಿನ ಬಂದಿದ್ದರು.

ಪಾರ್ವತಿ: ಅಹುದೇ?

ಸಗುಣಾ: ಅಹುದು. ಮಾತಾಡುತ್ತ, ನಿನ್ನ ಸುದ್ದಿ ಎತ್ತಿದರು.

ಪಾರ್ವತಿ: ನನ್ನ ಸುದ್ದಿ? ನಿನ್ನೊಡನೆ?

ಸಗುಣಾ: ಅಲ್ಲ—ನಮ್ಮವರೊಡನೆ. ಅವರು ನಿನಗೆ ತುಂಬಾ ಹೆದರುವುದಂತೆ.

ಪಾರ್ವತಿ: ಅಹುದೇ? ಹಾಗೆ ಹೇಳಿದರೆ?

ಸಗುಣಾ: ಅವರು ಚಹಾ ಮಾಡೆಂದರೆ ನೀನು ಮಾಡುವುದಿಲ್ಲವಂತೆ. ಬೇರೆಯವರು ಮಾಡಿದ್ದನ್ನು ತಂದು ಕೊಡುವುದೂ ಇಲ್ಲವಂತೆ.

ಪಾರ್ವತಿ: ಹೀಗೆಯೇ ಹೇಳಿದರೆ?

ಸಗುಣಾ: ಅಹುದು. ನೀನು ಹೇಗೆ ಗಂಡನನ್ನು ಅಂಕೆಯಲ್ಲಿಟ್ಟು ಕೊಂಡಿದ್ದೀಯೆ? ನನಗೂ ಹೇಳೇ ಸ್ವಲ್ಪ!

ಪಾರ್ವತಿ: ಹಾಗೇ ಹೇಳಿದರು, ಅಲ್ಲವೆ? ನಿನ್ನ ಗಂಡ ಅದಕ್ಕೆ ಏನು ಹೇಳಿದರು?

ಸಗುಣಾ: (ನಗುತ್ತ)—ನಮ್ಮವರು ಹೇಳಿದರು· ಹಿ ಹ್ಹಿ!

ಪಾರ್ವತಿ: ಏನು ಹೇಳಿದರು, ಏನು ಹೇಳಿದರು?

ಸಗುಣಾ: ಅಕೋ ಯಾರೊಡನೆಯೂ ಹೇಳಬೇಡ! ನಿನಗೆ ಪ್ರೀತಿ ಮಾಡಬೇಕಂತೆ; ಮತ್ತೆ ಕರುಣೆ ಮಾಡಬೇಕಂತೆ; ಮತ್ತೆ ಕೋಪ ಮಾಡಬೇಕಂತೆ. ಮೋಸ ಅಲ್ಲವಂತೆ.

ಪಾರ್ವತಿ: ಪ್ರೀತಿ—ಕರುಣೆ—ಕೋಪ....?

ಸಗುಣಾ: (ಅಹುದೆಂದು ತಲೆಯಲ್ಲಾಡಿಸುತ್ತ)—ಎಲ್ಲಾ ಐದೈದೇ ನಿಮಿಷ ಮಾಡಿ ನೋಡಬೇಕಂತೆ. ಮತ್ತೆ ಎರಡೇ ತಿಂಗಳಲ್ಲಿ ನಮ್ಮವರ ಅವಸ್ಥೆ ನಿನ್ನ ಗಂಡನಿಗಂತೆ!

ಪಾರ್ವತಿ: ಹೂಂ! ಹುಂ! ಪ್ರೀತಿ—ಕರುಣೆ— ಕೋಪ? ನನ್ನೊಡನೆ ಮಾಡಬೇಕು! ನನ್ನ ಗಂಡ! ಹೇಳಿಕೊಟ್ಟವ ನಿನ್ನ ಗಂಡ! ಅಲ್ಲವೆ?

ಸಗುಣಾ: ಅದು ಹೋಗಲಿ, ಪಾರ್ವತಿ. ನಿನ್ನ ಗಂಡನನ್ನು ನೀನು ಗೆದ್ದ ರೀತಿ ನನಗೆ ಹೇಳು.

ಪಾರ್ವತಿ: ಸಗುಣಾ! ನಿನ್ನಂತಹ ಹುಡುಗಿಯರಿಂದ ಆಗೋದಿಲ್ಲವಮ್ಮ ಅದೆಲ್ಲಾ! ಅದಕ್ಕೆಲ್ಲಾ ಲೆಕ್ಕ ಸರೀ ಬೇಕು! (ತನ್ನಷ್ಟಕ್ಕೆ)-ಪ್ರೀತಿ-ಕರುಣೆ-ಕೋಪ-ಐದೈದು ನಿಮಿಷ!

ಸಗುಣಾ: ಹಾಗೆ ಹೇಳಬೇಡ ಪಾರ್ವತಿ! ನಿನ್ನನ್ನು ನೋಡಿದರೆ ನನಗೆ ತುಂಬ ಭಕ್ತಿ. ನಿನ್ನ ಹಾಗೇ ನಾನೂ ಮಾಡ್ಯೇನು?

ಪಾರ್ವತಿ: (ಆಲೋಚಿಸುತ್ತ) ನಾನು ಮಾಡಿದ ಹಾಗೆ ನೀನು ಮಾಡೋದು ಬೇಡ. ನೀನು ಈಗ ಒಂದು ಉಪಾಯ ಮಾಡು. ಗಂಡನು ಮನೆಗೆ ಬಂದ ಕೂಡಲೇ ಓರೋರೆ ನೋಟ ಬೀರು. ಅವನ ಆ ಪ್ರೇಮ ಉಕ್ಕಿ ಉಕ್ಕಿ ಬರುವಂತೆ ಮಾಡು. ಅನಂತರ ಅವನು ಕೇಳಿದ್ದಕ್ಕೆಲ್ಲ ಇಲ್ಲ ವೆನ್ನುವ ಒಂದು ಸಟನೆ ಮಾಡು. ಕೆಲವು ನಿಮಿಷಗಳ ನಂತರ—ಚಿಲ್ಲರೆ ಕೆಲಸಗಳನ್ನೆಲ್ಲಾ ನಿನಗೆ ಹೇಳಬಾರದೆಂದೂ, ನೌಕರರನ್ನಿಡಬೇಕೆಂದೂ ಸೂಚಿಸು, ತನ್ನಷ್ಟಕ್ಕೆ ಹದಕ್ಕೆ ಬರುತ್ತಾನೆ. ಹೆಂಡತಿಯೆಂದರೆ ತೊತ್ತಲ್ಲ ಎಂದು ಒಂದು ಸೂಚನೆ ಕೊಟ್ಟುಬಿಡು. ಗಂಡುಸರು! ನನಗೆ ಸರ್ವಾಧಿ ಕಾರ ಬಂದರೆ ಏನು ಮಾಡ್ಯೇನು ಗೊತ್ತಿದೆಯೆ?

ಸಗುಣಾ: ಏನು?

ಪಾರ್ವತಿ: ಬೆಳಿಗ್ಗೆ ಎದ್ದ ಕೂಡಲೇ ಎಲ್ಲ ಗಂಡಂದಿರು ಹೆಂಡಂದಿ ರನ್ನು ನಮಸ್ಕರಿಸಲೇ ಬೇಕು!

ಸಗುಣಾ: ವಾಹವಾ!

ಪಾರ್ವತಿ: ಬೆಳಗ್ಗಿನ ಚಹಾವನ್ನು ಗಂಡ ತಯಾರಿಸಲೇ ಬೇಕು— ಸಾಯಂಕಾಲ ಹೆಂಡತಿ.

ಸಗುಣಾ: ಏನು ಸೊಗಸು!

ಪಾರ್ವತಿ: ಒಂದೂಟ ಗಂಡ ತಯಾರಿಸಲೇಬೇಕು- ಒಂದೂಟ ಹೆಂಡತಿ!

ಸಗುಣಾ: ಅಯ್ಯೋ-ನಮ್ಮ ಭಾರ ಎಷ್ಟು ಕಡಮೆಯಾದೀತು!

ಪಾರ್ವತಿ: ಭಾರ? ಅರ್ಧಾಂಗಿ ಎಂದು ಬಾಯಲ್ಲಿ ಹೇಳಿದರೆ ಸಾಲದು. ಎಲ್ಲವೂ ಅರ್ಧರ್ಧ ಇರಬೇಕು!

ಸಗುಣಾ: ಅಹುದು ಪಾರ್ವತಿ! ಆದರೆ, ಅದೆಲ್ಲ ಕನಸು ನೋಡು!

ಪಾರ್ವತಿ: ಕನಸೇಕೆ? ನಾನು ನನ್ನ ಮನೆಯಲ್ಲಿ, ನೀನು ನಿನ್ನ ಮನೆಯಲ್ಲಿ, ಮೂರನೆಯವಳು ಅವಳ ಮನೆಯಲ್ಲಿ- ಈ ಸುಧಾರಣೆಗಳನ್ನು ಮೆಲ್ಲಗೆ ತರುತ್ತಾ ಬರಬೇಕು; ಸಗುಣಾ! ಪುರುಷ ಜಾತಿಯ ಸೊಕ್ಕನ್ನೆಲ್ಲ ಇಳಿಸಬೇಕು. ಊರನ್ನಾಳುವ ಶಕ್ತಿಯಿಲ್ಲದಿದ್ದರೆ ಇವಂಗೆ ಆಳಲು ಹೆಂಡತಿಯೊಬ್ಬಳಿದ್ದಾಳೆ. ಊರಿಗೆಲ್ಲ ಹೆದರಿ ಬಂದು, ಮನೆಯಲ್ಲಿ ಹೆಂಡತಿಯನ್ನು ಹೆದರಿಸುವ ಪುಕ್ಕರಿವರು, ಏನು! ಮನೆಧನಿ ಬಾಡಿಗೆ ಕೇಳಲು ಬಂದರೆ, ಉತ್ತರಕೊಡಬೇಕು ನಾವು! ಸಾಮಾನಿನ ಅಂಗಡಿಯವ ವಸೂಲಿಗೆ ಬಂದರೆ, ಜಗಳಕ್ಕೆ ನಿಲ್ಲಬೇಕು ನಾವು.

ಸಗುಣಾ: ನಿಜ ಪಾರ್ವತಿ! ಹಾಲಿನವಳು ಎರಡು ತಿಂಗಳಿಂದ ತನ್ನ ಎಮ್ಮೆಗೆ ಹಿಂಡಿಯಿಲ್ಲ ಎಂದು ಹಣ ಕೇಳುತ್ತಾ ಇದ್ದಾಳೆ; ನಮ್ಮವರು ಹಣ ಕೊಡೋದೇ ಇಲ್ಲ. ಊಟಕ್ಕೆ ಕುಳಿತರೆ ಹಾಲು ತೆಳ್ಳಗೇನು ಎಂದು ಕೇಳುತ್ತಾರೆ. ಎಮ್ಮೆಗೆ ಎರಡು ತಿಂಗಳಿಂದ ಹಿಂಡಿಯಿಲ್ಲದಿದ್ದರೆ ಹಾಲು ದಪ್ಪವಾಗೋದು ಹೇಗೆ?

ಪಾರ್ವತಿ: ಹಾಲಿನ ಹಣಕೊಡದಿದ್ದರೆ ಗುಣವೂ ಕಡಿಮೆ! ಬಾವಿಯ ನೀರು ತಂದು ಬಡಿಸು!

ಸಗುಣಾ: ಕೇಳೋದಿಲ್ಲ ಪಾರ್ವತಿ. ಅಯ್ಯೋ ಅವರ ಕೋಪವೆ?

ಪಾರ್ವತಿ: ಕೋಪ ಬಂದರೆ, ನೀರನ್ನು ಬಿಸಿ ಕೂಡ ಮಾಡಬೇಡ. ತಣ್ಣಗೆ ಹೊಯ್ದು ಬಿಡು. ಕೋಪ ಆರುತ್ತದೆ

ಸಗುಣಾ: ನೋಡೋಣಮ್ಮ. ಹೇಗಾಗುತ್ತದೋ ನೋಡೋಣ. ಬರುತ್ತೇನೆ.

ಪಾರ್ವತಿ: ಹೋಗು. ಏನಾದರೂ ಹೆಚ್ಚುಕಡಿಮೆಯಾದರೆ ಬಂದು ಹೇಳು. ಲೆಕ್ಕ ಸರಿ ಇರಬೇಕು. (ಪತ್ರಿಕೆ ತಿರುವಿ ನೋಡಿ, ಕೋಪದಿಂದ—"ಅಯ್ಯಪ್ಪ! ಗಂಡನನ್ನು ಹೇಗೆ ಹದಗೊಳಿಸಬೇಕೆಂದು ಈ ಪತ್ರಿಕೆಯವರು ಬರೆಯುವುದೇ ಇಲ್ಲಪ್ಪಾ!")

ಸೀನ್ ೪.

(ನರ್ಸಿಂಗರಾಯರು ಮನೆಯನ್ನು ಪ್ರವೇಶಿಸುವರು.)

ನರ್ಸಿಂಗ: (ಸ್ವಗತ)-ಪ್ರೇಮ—ಕರುಣೆ-ಕೋಪ! ಐದ್ದೈದು ನಿಮಿಷ! (ಗಡಿಯಾರ ನೋಡುತ್ತ)-೩-೩೫ ಆಯಿತು. ೩-೩೫ರಿಂದ ನಲ್ವತ್ತರ ವರೆಗೆ ಪ್ರೇಮ-(ಪ್ರಕಟವಾಗಿ)-ಪಾರೂ!

ಪಾರ್ವತಿ: (ತಲೆಯೆತ್ತಿ ನೋಡಿ) ಇಸ್ಸಿ! ಏನಿದು ಈ ದಿನ ವಿಶೇಷ ಅವತಾರ? ಹೊಟ್ಟೆನೋವೆ?

ನರ್ಸಿಂಗ: ಪಾ ಆರೂ!

ಪಾರ್ವತಿ: ಇಸ್ಸಿಸ್ಸಿ! ನರ್ತನವಮಾಡಿಕೊಂಡು ಬಂದು, ಪಾರೂ ಅಂತೆ! ಪಾರು ಎಂದರೆ ಏನು ಹೊಸ ಹೆಸರಪ್ಪಾ ಇದು!

ನರ್ಸಿಂಗ: ಪಾರೂ! ಪ್ರೀತಿಗೆ ಹೊಸತು ಹಳತು ಎಂಬುದಿದೆಯೇ? ಶೇಕ್ಸ್‌ಪೀಯರ್ ಹೇಳಿದ್ದಾನೆ—ಗುಲಾಬಿಗೆ....

ಪಾರ್ವತಿ: ಗುಲಾಬಿಗೆ ಶೇಕ್ಸ್‌ಪೀಯರ್ ಬೇಕಾದ್ದನ್ನು ಹೇಳಲಿ! ಕಾಳಿದಾಸ ನಳಿನಿಗೆ ಹೇಳಿದ್ದಾನೆ. ಆದರೆ, ನಿಮಗೆ—ಈ ರೀತಿ ಮೈಯನ್ನು ತಿರುವಿ ತಿರುವಿ ಆತ್ಮಹತ್ಯ ಮಾಡಿಕೊಳ್ಳಲು ಯಾರು ಹೇಳಿದ್ದಾರೆ?

ನರ್ಸಿಂಗ: ಅಲ್ಲ, ಗುಲಾಬಿ....

ಪಾರ್ವತಿ: ಗುಲಾಬಿಯುಲ್ಲ, ಜಿಲೇಬಿ. ನೀವು ಸ್ವಲ್ಪ ಬಾಯಿ ಮುಚ್ಚಿ ನೋಡೋಣ. ಪರಸ್ತ್ರೀಯರ ಸುದ್ದಿ ಎತ್ತಬೇಡಿಲ್ಲಿ!

ನರ್ಸಿಂಗ: ಪರಸ್ತ್ರೀಯುಲ್ಲ; ಹೂ—ಪುಷ್ಪ!

ಪಾರ್ವತಿ: ಪರಸ್ತ್ರೀಯರೆಲ್ಲ ಹೂ ನಿಮಗೆ! ಮತ್ತೆ ನಾನು ಹುಳವೆ? ಇಷ್ಟು ದೊಡ್ಡವಳಿರುವಾಗ ಚಿಕ್ಕ ಹೂಗಳ ನೆನಪೆ?

ನರ್ಸಿಂಗ: ಪಾತೂ!....

ಪಾರ್ವತಿ: ಅಯ್ಯಯ್ಯ! ಏನು ರೋಗವಪ್ಪ ಇದು! ಪಾತು ಅಂತೆ! ಇನ್ನು ಸೀತೆ-ಹಾತೆ-ಸೋತೆ-ಕೂತೆ ಎನ್ನುತ್ತಾರೋ ಏನೋ! ಏನು, ಏನಾಗಿದೆ ನಿಮಗೆ? ಡಾಕ್ಟರರನ್ನು ಕರೆಸಬೇಕೆ?

ನರ್ಸಿಂಗ: ಜೇಡ ಪಾತೂ! ಹೆಚ್ಚು ಪ್ರೀತಿ!

ಪಾರ್ವತಿ: ಓಹೊಹೊ, ಬಲು ತುಂಬಿ ತುಳುಕಾಡುತ್ತಿದೆ! ಫಕ್ಕನೆ

ಉಂಟಾದ ಪ್ರೀತಿ! ಏನುಮಾಡಬೇಕು ನನ್ನ ಗಂಡಾ—ಪ್ರೀತಿಯ ಮುದ್ದೆ! (ಏಳುವಳು.)

ನರ್ಸಿಂಗ: ಅಲ್ಲಲ್ಲ ಕುಳಿತುಕೊ. (ಸ್ವಗತ) ಐದು ನಿಮಿಷವಾಯಿತು. ಈಗ ಕರುಣೆ! (ಪ್ರಕಟವಾಗಿ) ಪಾತೂ! ನಿನಗೆ ಏನೇನೆಲ್ಲ ಬೇಕೋ ಅದನ್ನೆಲ್ಲ ಕೇಳು!

ಪಾರ್ವತಿ: ಅಯ್ಯಯ್ಯಯ್ಯೊ! ಏನು ಬೇಕೊ ಅದನ್ನೆಲ್ಲ ಕೇಳು! ದಾರಿಯಲ್ಲಿ ಸಿಂದಬಾದ್ ಸಿಕ್ಕಿ ಎಲ್ಲ ಆಸ್ತಿ ಬರೆದುಕೊಟ್ಟನೆ? ಕೇಳಿದ್ದನ್ನೆಲ್ಲ ಕೊಡುವುದು! ಶಾಲೆಯಲ್ಲೆಷ್ಟು ಸಂಬಳ ನಿಮಗೆ?

ನರ್ಸಿಂಗ: ಪಾತೂ, ನಿನ್ನ ಮನೋಭೀಷ್ಟಗಳೇನೆಂದು ಈ ನರ್ಸಿಂಗ ನೊಡನೆ ಹೇಳು.

ಪಾರ್ವತಿ: ಏನು ಕರುಣೆಯಪ್ಪ ಇಂದು ಈ ಸಿಂಗನದು! ಮನೆ ಹಿಂಬದಿಯ ಜಗುಲಿಗೆ ಸಿಮೆಂಟು ಹಾಕಿಸೆಂದು ಎರಡು ವರ್ಷಗಳಿಂದ ಹೇಳುತ್ತಾ ಇದ್ದೇನೆ,—ಈ ಸಿಂಗ ಮೂರು ಬಾರಿ ಕಾಲು ಜಾರಿಬಿದ್ದರೂ ಜಗಲಿ ರಿಪೇರಿ ಮಾಡಿಸಿಲ್ಲ. ಸಿಂಗನ ದೋತರ ಹರಿದಿದೆ-ಸಿಂಗ ಹೊಸ ದೋತರ ತಂದಿಲ್ಲ; ಒಂದು ನೂಲುಂಡೆ ತಾರೆಂದರೂ ಸಿಂಗನಿಗೆ ಉಸಿರಿಲ್ಲ. ಈಗ ನನ್ನ ಮನೋಭೀಷ್ಟವೇನೆಂದು ಸಿಂಗನಿಗೆ ತಿಳಿಸಬೇಕಂತೆ. ಸಿಂಗನಿಗೆ ಪಿತ್ಥವಿಕಾರವಾಗಿದೆ!

ನರ್ಸಿಂಗ: ಪಾತೂ, ಕೇಳು!

ಪಾರ್ವತಿ: ಪ್ರೇಮದ ಹಂಡೆಯನ್ನೆ ಮಗುಚಿ ಹಿಡಿದಂತೆ ಕಾಣುತ್ತದೆ.

ನರ್ಸಿಂಗ: ಪಾತೂ—ನಿನ್ನನ್ನಲ್ಲದೆ ನಾನು ಯಾರನ್ನು ಪ್ರೀತಿ ಮಾಡಲಿ! ಕರುಣೆ ತಡೆಯಲಾರೆ. ಬೇಗ ಹೇಳು—ನಿನಗೇನು ಬೇಕು!

ಪಾರ್ವತಿ: ನಾನು ಏನು ಹೇಳಲಿ. ಒಂದು ಪಟ್ಟಿ ತಯಾರಿಸಿ ಮತ್ತೆ ಕೊಡುವೆನಂತೆ. ಈಗ ಎರಡು ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ.

ನರ್ಸಿಂಗ: ಕೇಳು, ಕೇಳು.

ಪಾರ್ವತಿ: ನೀವು ಈ ದಿನ ಸಾಲೆಯಲ್ಲಿ ಕಥೆ ಪಾಠ ಹೇಳುವಾಗ, 'ಗುಂಡರಾಯರು ಬಂಡಿಯಿಂದಿಳಿದು ಹೋದರು' ಎನ್ನುವ ಬದಲಿಗೆ, ತಪ್ಪಿ 'ಬಂಡರಾಯರು ಗುಂಡಿಯಿಂದಿಳಿದು ಹೋದರು' ಎಂದಿರಂತೆ, ನಿಜವೆ?

ನರ್ಸಿಂಗ: ನಿಜ.

ಪಾರ್ವತಿ: ಆಗ ಹುಡುಗರು ನಕ್ಕರಂತೆ. ನಿಮಗೆ ಕೋಪ ಬಂದು, 'ನಗುವವರೆಲ್ಲ ಹೊರಗೆ ನಡೆಯಿರಿ' ಎಂದು ಹೇಳಲು ಹೋಗಿ, ಪುನಃ ತಪ್ಪಿ 'ಹೋಗುವವರೆಲ್ಲ ನಡಿಗೆ ನೆಗೆಯಿರಿ' ಎಂದಿರಂತೆ. ನಿಜವೇ?

ನರ್ಸಿಂಗ: ನಿಜ, ನಿಜ.

ಪಾರ್ವತಿ: ಹುಡುಗರು ಪುನಃ ನಕ್ಕರಂತೆ. ನಿಮಗೆ ಪುನಃ ಕೋಪ ಬಂದು, 'ಕತ್ತೆಗಳೆ, ಚಿತ್ತ ನೋಡಿದ್ದಿರೊ?' ಎನ್ನುವುದಕ್ಕೆ "ಚಿತ್ತಗಳೇ ಕತ್ತೆ ನೋಡಿದ್ದಿರೋ?" ಎಂದಿರಂತೆ. ಹುಡುಗರು ನಿಮ್ಮನ್ನು ನೋಡಿ ಚೆನ್ನಾಗಿ ನಕ್ಕರಂತೆ. ನಿಜವೇ?

ನರ್ಸಿಂಗ: ನಿಜ, ಪಾತೂ ನಿಜ.

ಪಾರ್ವತಿ: ಒಳ್ಳೆ ಉಪಾಧ್ಯಾಯರು ನೀವು! ಇನ್ನೊಂದು ವಿಷಯ

ನರ್ಸಿಂಗ: (ವಾಚ್ ನೋಡುತ್ತ—ಸ್ವಗತ)—ಕರುಣೆಯ ಸಮಯ ದಾಟಿತು. ಈಗ ಕೋಪ. (ಪ್ರಕಟವಾಗಿ)—ಪಾರ್ವತಿ! ಏನು ಹೇಳಿದೆ? ನಾನ್ಯಾರೆಂದು ಭಾವಿಸಿದೆ? ನಾನು ಶಾಲೆಯಲ್ಲಿ ಮಾಡಿದ್ದನ್ನೆಲ್ಲ ಕೇಳಲು ನೀನು ಯಾರು? ನೀನ್ಯಾರ ಮಗಳು? ಯಾರ ಹೆಂಡತಿ? ನಿನ್ನ ಸ್ಥಾನ ವೇನು? ನಿನ್ನ ಮರ್ಯಾದೆಯೇನು? ನಿನ್ನ ಹಕ್ಕುಗಳೇನು? ನಿನ್ನ ನಾಲಗೆಯ ಉದ್ದವೆಷ್ಟು?

ಪಾರ್ವತಿ: ಈಗಿನ ಅವತಾರವೇ ಬೇರೆ! ನಾಟಕಮಾಡುತ್ತಿರಾ? ನಾನ್ಯಾರೆಂದು ಗೊತ್ತಿಲ್ಲವೆ?

ನರ್ಸಿಂಗ: ಜೋಕೆ, ಹೆಂಡತಿಯು ಹೆಂಡತಿಯಾಗಿಯೇ ಉಳಿಯ ಬೇಕು. ಗಂಡನಾಗಲು ಹೋದರೆ ಮೋಸ!

ಪಾರ್ವತಿ: ಮುಚ್ಚಿರಿ ಬಾಯಿ, ಮುಚ್ಚಿ! ಬಡ ಮಕ್ಕಳನ್ನು ಕಷ್ಟ ದಿಂದ ಸಾಕಿ ಸಾಲೆಗೆ ಕಳಿಸಿದರೆ, ನೀವು ಹೊಡಿಯೋದು— ಮತ್ತೆ ಮನೆಗೆ ಬಂದು ಹೆಂಡತಿಯನ್ನು ಹೆದರಿಸೋದು. ಸಾಲೆಯಲ್ಲಿ ಟೀಚರ್ ಆದರೆ ಇಲ್ಲಿ ಕ್ರೀಚರ್ ತಿಳಿಯಿತೆ? ನನ್ನ ನಾಲಗೆಯ ಉದ್ದ ಬೇಕೆ ನಿಮಗೆ?

ನರ್ಸಿಂಗ: ಹೋಗು—ನಡಿ! ಒಂದು ಕಪ್ ಚಹಾ ಮಾಡು, ಕೇಟಿ!

ಪಾರ್ವತಿ: ಕೇಟಿಯಲ್ಲ—ಎತ್ತಿನ ಚಾಟಿ! ಬಾವಿಯ ನೀರೂ ಕೊಡಲಾರೆ. ಸಾಲೆಯಲ್ಲಿ ಮಾಸೆ ತಿರುವಿ ನಡೆದಂತೆ ಇಲ್ಲಿ ನಡೆಯುವು ದಿಲ್ಲ. ತಿಳಿಯಿತೇನು? ಮೇಸ್ಟ್ರಾಗಿ ನೀವು ಕೊಟ್ಟ ಸುಖ ಗೊತ್ತಿದೆ.

ನರ್ಸಿಂಗ: ನಡೀ ಹೊರಗೆ-? ನಡೀ! ಅಪ್ಪನ ಗಂಟಲ್ಲ! ನಿನ್ನ ಭೂತಾಕಾರದ ದೇಹ—ಫರ್ಲಾಂಗು ಉದ್ದ ನಾಲಗೆ—ಅಂಬಡೆ ಕಣ್ಣು -ಎಲ್ಲ ಹೊರಗೆ ಹೋಗಲಿ!

ಪಾರ್ವತಿ: ಏನೆಂದಿರಿ? ನಾನು ನಡಿಯಬೇಕೆ? ಓಡಿರಿ ಇಲ್ಲಿಂದ! ನನಗೆ ಗಂಡನೆಂದರೆ ಯಾರೆಂದು ಗೊತ್ತಿಲ್ಲ. ನಿಮ್ಮ ಗುರುತೇ ಇಲ್ಲ ನನಗೆ! ಇದು ನನ್ನ ಮನೆ—ಮತ್ತೆ (ಒಂದು ಚಾಟಿ ತೆಗೆಯುತ್ತ)—ಇದು ನನ್ನ ಚಾಟಿ—ಕೇಟಿ ಬದಲಿಗೆ!

ನರ್ಸಿಂಗ: (ಹಿಂದೆ ಸರಿಯುತ್ತ)-ಪಾರ್ವತಿ....!

ಪಾರ್ವತಿ: ಹೂಂ, ಪಾರ್ವತೀ—ಮಾಡುತ್ತಾಳೆ ನಿಮಗೆ ಆರತೀ! ನನ್ನ ಹೆಸರು ತೆಗೆದರೆ ಚಾಟಿ ಬೀಸಿಬಿಡುವೆನು! ನಾನ್ಯಾರೆಂದು ನನಗೇ ಗೊತ್ತಿಲ್ಲ.

ನರ್ಸಿಂಗ: ಈಗ ನನ್ನ ಕೋಪಕ್ಕೆ ಮೊದಲಾಗಿ ಐದು ನಿಮಿಷ ವಾಯಿತೇ?

ಪಾರ್ವತಿ: ನಿಮಗೆ ಹೇಳಿಕೊಟ್ಟ ಸೀತಾರಾಮರಾಯರೊಡನೆ ಕೇಳಿಕೊಳ್ಳಿ!

ನರ್ಸಿಂಗ: (ಚಕಿತನಾಗಿ)—ಅ ಅ ಅ! ನಿನಗೆ ಯಾರು ಹೇಳಿದರಪ್ಪಾ!

ಪಾರ್ವತಿ. ನನಗೆ? ನಿಮಗೆ ಹೇಳಿಕೊಟ್ಟವರ ಹೆಂಡತಿ!

ನರ್ಸಿಂಗ: ಓಽಽಽಽ (ಕುಸಿದಂತಾಗಿ, ಕುಳಿತು ಕೊಳ್ಳುವನು.)

(ತೆರೆ.)

ಸೀನ್ ೫.

[ಸೀತಾರಾಮರಾಯರ ಮನೆ. ಕೊಠಡಿಯಲ್ಲಿ ಸೀತಾರಾಮರಾಯರು ಕುಳಿತು ಒಬ್ಬರೇ ಚದುರಂಗದ ನಕಾಶೆ ನೋಡುತ್ತಿರುವರು.]

ಸೀತಾರಾಮ: ಸಗ್ಣಾ!.... ಸಗ್ಣಾ!.... ಏ ಸಗ್ಣಾ!.... ಇಲ್ಲ–ಏನಿದು ಏನ ಸಗ್ಣೆ ಇಲ್ಲ? ಏಯ ಸಗ್ಣಾ! (ಸಗುಣಾ ಮೆಲ್ಲನೆ ಬರುವಳು)

ಸಗುಣಾ: ಏನು?

ಸೀತಾರಾಮ: ಎಲ್ಲದ್ದೆಯೋ ನೀನು?

ಸಗುಣಾ: ಮನೆಯೊಳಗೇ ಇದ್ದೆ.

ಸೀತಾರಾಮು: ಕರೆದಾಗ ಮಾತಾಡುವುದಿಲ್ಲವೇಕೆ?

ಸಗುಣಾ: ಅಷ್ಟು ಜಿರುಸಾಗಿ ಕರೆಯಬೇಕೆ? (ಅಂಗವಿಕಾರ ಮಾಡುವಳು.)

ಸೀತಾರಾಮು; ಅರರರರೆ! ಏನಿದು—ಅಪಸ್ಮಾರವೇ? ಹಾಗೆ ಮಾಡಬೇಡ. ಬಿದ್ದುಬಿಟ್ಟಿ? ಜೋಕಾದರೆ, ಒಂದು ಹಾಸಿಗೆ ಹಾಸಿ, ಅಲ್ಲೇ ಕೊರಳು ತಿರುಗಿಸಿ ಬಿದ್ದುಬಿಡು! (ಸಗುಣಾ ಪುನಃ ಅಂಗವಿಕಾರ ಮಾಡುತ್ತ, ಹತ್ತಿರ ಬಂದು, ಕೊರಳಿಗೆ ಕೈಹಾಕುವಳು.)

ಸೀತಾರಾಮು: ಲಲಲಲಲ! ಏನಾಗಿದೆಯಪ್ಪ ಈ ದಿನ ಇವಳಿಗೆ! ಸಗ್ಣಾ! ನೆಟ್ಟಗೆ ನಿಲ್ಲು! ಹಾಗೆಲ್ಲ ಮೈಯಲ್ಲಿ ಕೈಹಾಕಿ ಪಳಪಳ ಮಾಡಬೇಡ! ಹುಳ ಮೇದ ಹಾಗೆ ಆಗುತ್ತದೆ!

ಸಗುಣಾ: ಇಲ್ಲ-ನಿಲ್ಲುವುದಿಲ್ಲ.

ಸೀತಾರಾಮು: ನಿಲ್ಲುವುದಿಲ್ಲವೇ? ಏಕೆ? ಏನು ಗ್ರಹಚಾರ ಬಂತಯ್ಯಾ ಇದು! ಒಳಗಾದರೂ ಹೋಗಿಬಿಡು! ಕಣ್ಣುಗಿಣ್ಣು ತಿರುಗಿಸಿ ಹಾಗೆ ಮಾಡಿದರೆ ನನ್ನ ಎದೆ ಒಡೆದೀತು!........ಹೋಗು, ಒಂದು ಕಪ್ ಚಹಾ ಮಾಡು!

ಸಗುಣಾ: ಚಹಾ ಮಾಡುವುದಿಲ್ಲ!

ಸೀತಾರಾಮು: ಮಾಡುವುದಿಲ್ಲವೆ? ಮತ್ತೇನು ಮಾಡುತ್ತಿ? ಗೆಜ್ಜೆ ಕೊಡಬೇಕೆ? ನಾಟ್ಯ ಮಾಡುತ್ತಿಯಾ? ಹೋಗೇ ಹೋಗು! ಚಹಾ ಮಾಡು! ಸಕ್ಕರೆ ಕಮ್ಮಿ ಏನು!

ಸಗುಣಾ: ನೀವು ಸಣ್ಣ ಸಣ್ಣ ಕೆಲಸ ನನಗೆ ಹೇಳಬೇಡಿ!

ಸೀತಾರಾಮು: ಅರೆ! ಸಣ್ಣ ಕೆಲಸ ಹೇಳಬಾರದೆ? ನಿನಗೆ ಹುಚ್ಚು! ದೊಡ್ಡ ಕೆಲಸ ಹೇಳಿದರೆ, ನಿನ್ನಂಥಾ ಪಾರಿವಾಳದಿಂದ ಆದೀತೇ?

ಸಗುಣಾ: ನೌಕರರನ್ನಿಡಿ.

ಸೀತಾರಾಮು: ನೌಕರರೇ? ಯಾರಿಗೆ, ಏಕೆ? ಕಾರ್ಯೇಷು ಮಂತ್ರಿ..... ಇತ್ಯಾದಿ ಎಂದರೆ ನೀನು. ನನಗೂ, ನಿನಗೂ ನೌಕರ ನೀನೆ! ಯಜಮಾನಿಯೂ ನೀನೆ! ಮಂತ್ರಿ-ರಾಣಿ-ಎಲ್ಲ ನೀನೆ! ಹೋಗು, ಹೋಗು, ಕೇಟೀ ತಾ.

ಸಗುಣಾ: ನಾನು ತರೋದಿಲ್ಲ.

ಸೀತಾರಾಮು: ಏ ಮುಸುಡೇ! ತರುವುದಿಲ್ಲ? ನಡೀ ಹೊರಗೆ!

ಸಗುಣಾ: ಹೋಗೋದಿಲ್ಲ.

ಸೀತಾರಾಮ: ಏನು, ಹೋಗೋದಿಲ್ಲವೆ? ನಿನಗೆ ಥೇಟು ಹುಚ್ಚು; ಅಪಾಯಕಾರಿ ಹುಚ್ಚು! ಹುಚ್ಚರ ಆಸ್ಪತ್ರೆಯಲ್ಲಿಡಿಸಬೇಕಾಯಿತು.

ಸಗುಣಾ: ಹುಚ್ಚರ ಆಸ್ಪತ್ರೆಯೆ? ಏಕೆ? ನಿಮ್ಮನ್ನು ಮದುವೆಯಾದುದಕ್ಕೆ ಉಪಕಾರವೆ? (ಅಳುವಳು.)

ಸೀತಾರಾಮ: ಸಗ್ಣಾ! ಹಟ ಮಾಡಬೇಡ; ನಿನ್ನಪ್ಪ ನಿನ್ನನ್ನು ನನಗೆ ಕೊಟ್ಟದು ಹೀಗೆ ಅಳಲಿಕ್ಕಲ್ಲ. ನಾಟ್ಯಮಾಡಲಿಕ್ಕೂ ಅಲ್ಲ. ನಿನಗೆ ಕಣ್ಣುಗಳಿದ್ದರೆ ಒಳಗೆ ಹೋಗಿ ದೇವರ ಪಟ ನೋಡು. ಕೂಗಿ ಹಾಳು ಮಾಡಬೇಡ; ತಿರುಗಿಸಿಯೂ ಸವೆಯಿಸಬೇಡ.

ಸಗುಣಾ: ನಾನು ಹುಟ್ಟಿದಂದಿನಿಂದ ನೀವು ನನಗೇನು ಸುಖ ಕೊಟ್ಟಿದ್ದಿರಿ?

ಸೀತಾರಾಮ: ಪಟ್ಟ ಆಯಿತು. ನಿನ್ನಮ್ಮ ಬಾಣಂತಿಯಾದದ್ದೇ ನನಗೆ ಗೊತ್ತಿಲ್ಲ. ನೀನು ಹುಟ್ಟಿದ ಹದಿನೆಂಟು ವರ್ಷಗಳ ವರೆಗೆ ನಿನ್ನ ಅಸ್ತಿತ್ವವೇ ನನಗೆ ತಿಳಿದಿರಲಿಲ್ಲ. ಇಲ್ಲದಿದ್ದರೆ ಆಗಾಗ್ಗೆ ನಿನ್ನನ್ನು ಕರೆದು ರಿಬ್ಬನ್ ಕೊಡುತ್ತಿದ್ದೆನೋ ಏನೋ! ದೈವಲೀಲೆ! ನಿನ್ನಪ್ಪ ನನಗೆ ನಿನ್ನನ್ನು ಕೊಟ್ಟರು, ನಾನು ಹಿಡಕೊಂಡು ಬಂದೆ. ಮದುವೆಯಾಗಿ ನಾಲ್ಕೇ ವರ್ಷವಾಯಿತು. ನಿಜವಾದ ಸುಖ ಇನ್ನು ಆರಂಭವಾಗಬೇಕು. ಈಗ ಈ ರಹಸ್ಯವನ್ನು ನೀನೇ ಹೇಳು,—ಈ ನಾಲ್ಕು ವರ್ಷವೂ ನಾಟ್ಯಮಾಡದೆ ಈ ದಿನ ಏಕೆ ಮಾಡುತ್ತಿ?

ಸಗುಣಾ: ಊರಿನಲ್ಲಿ ಹೆಂಡಂದಿರನ್ನು ಮದುವೆಯಾದ ದಿನದಿಂದ ಗಂಡಂದಿರು ಎಷ್ಟು ಪ್ರೀತಿಸುತ್ತಾರೆ!

ಸೀತಾರಾಮ: ಥೇಟು ಹುಚ್ಚು! ಮದುವೆಯಾದ ಕೂಡಲೇ ಮಾಡುವ ಪ್ರೀತಿಯೆಲ್ಲಾ ಉನ್ಮಾದ! ಈಗ ನಮ್ಮ ಪ್ರೇಮವಿದೆಯಲ್ಲ—ಅದು ಎಷ್ಟು ಚಂದ ನೋಡು! ಕ್ರಮದಲ್ಲಿ ಇದೆ. ಚಂದ್ರಕಿರಣದಂತೆ ಶೀತಳ! ಪ್ರಭಾತದಂತೆ ಮೆಲ್ಲನೆ ಮೂಡಿಬಂದು, ಮತ್ತೆ "ಜಗ್" ಎನ್ನುತ್ತದೆ.

ಸಗುಣಾ: ಅದೆಲ್ಲಾ ದೊಡ್ಡ ದೊಡ್ಡ ಮಾತು ನನಗೆ ಅರ್ಥವಾಗುವುದಿಲ್ಲ. ಒಟ್ಟಾರೆ ನಾನು ಕೇಟಿ ಮಾಡುವುದಿಲ್ಲ.

ಸೀತಾರಾಮ: ಮಾಡುವುದಿಲ್ಲವೇ? (ವಾಚು ನೋಡಿ)—ಹಾಗಾದರೆ,

ಮೂರೇ ನಿಮಿಷ—ನಿನಗೆ ಮೂರೇ ನಿಮಿಷ ಕೊಟ್ಟಿದ್ದೇನೆ. ಅಷ್ಟರೊಳಗೆ ನನ್ನೆದುರಿಂದ ಮಾಯವಾಗಬೇಕು.

ಸಗುಣಾ: ನಾನು ಈಗಲೇ ಹೋಗುತ್ತೇನೆ.

ಸೀತಾರಾಮು: ಬೇಡ—ಮೂರು ನಿಮಿಷದಲ್ಲಿ ಹೋಗು.

ಸಗುಣಾ: ಕೂಡದು; ಈಗಲೇ ಹೋಗುತ್ತೇನೆ.

ಸೀತಾರಾಮು: ಹುಂ, ಹೋಗುತ್ತಿ! ಎಲ್ಲಿಗೆ ಹೋಗುತ್ತಿ? ಅಪ್ಪನ ಮನೆ ದೂರವಿದೆ!

ಸಗುಣಾ: ಅಪ್ಪನ ಮನೆಯಿಲ್ಲದಿದ್ದರೆ ಸ್ನೇಹಿತರ ಮನೆಯಿದೆ. ನರ್ಸಿಂಗರಾಯರ ಹೆಂಡತಿ ಪಾರ್ವತಿ ಇದ್ದಾಳೆ.

ಸೀತಾರಾಮು: (ಆಶ್ಚರ್ಯದಿಂದ) ಏನು, ನರ್ಸಿಂಗರಾಯರ ಹೆಂಡತಿಯೇ? ಆ ಯುದ್ಧ ಹಡಗದ ಸ್ನೇಹ ನಿನಗೆ ಹೇಗಪ್ಪ? ಸಗುಣಾ, ನೀನು ಲೈಫ್ ಬೋಟ್!

ಸಗುಣಾ: ಅದೆಲ್ಲ ನಮಗೇಕೆ? ನೀವು ಹೆಸರಿಡಬೇಡಿ. ನಮ್ಮ ಶಾಲೆಯ ಹಳೆ ಗೆಳತಿಯೊಡನೆ ನಾನು ಇರುತ್ತೇನೆ. ಮನಬಂದಂತೆ ನಡೆಯುತ್ತೇನೆ. (ಹೊರಟುಹೋಗುವಳು.)

ಸೀತಾರಾಮು: ಒಹೋ,--ಸರಿ! ನರ್ಸಿಂಗರಾಯರಿಗೆ ಈ ಸೀತಾರಾಮು ರಾಯರ ಆಶೀರ್ವಾದ—ಸೀತಾರಾಮುರಾಯರ ಹೆಂಡತಿಗೆ ಆ ನರ್ಸಿಂಗ ರಾಯರ ಹೆಂಡತಿಯ ಆಶೀರ್ವಾದ. ಸರಿ ಹೋಯಿತು! ಈ ಪಾರಿವಾಳ ಹೋಯಿತು. ಇದನ್ನೀಗ ಹೇಗೂ ಹಿಡಿದು ತಂದು ಸರಿಗೊಳಿಸಬೇಕಾಯಿತು.

ಸೀನ್ ೬ (ರಸ್ತೆ)

(ರಸ್ತೆಯಲ್ಲಿ ನರ್ಸಿಂಗರಾಯರು ಬರುತ್ತಿರುವರು.)

ನರ್ಸಿಂಗ: ಪ್ರೀತಿ-ಕರುಣೆ-ಕೋಪ! ಎಲ್ಲಾ ಐದೈದೇ ನಿಮಿಷ! ಹದಿನಾರನೇ ನಿಮಿಷಕ್ಕೆ ನಾನು ಹೊರಗೆ! ಇನ್ನು ಯಾರಿಗೆ ಪ್ರೀತಿ ಮಾಡೋದಪ್ಪ? ನನಗೇಕೆ ಸೀತಾರಾಮುರಾಯರ ದೋಸ್ತಿ........ಎಂದರೆ ಅವರೇನು ಹಾಳುಮಾಡಿದ್ದಾರೆ! ನನ್ನ ಪ್ರೀತಿ ಸರಿಯಿರಲಿಲ್ಲವೇನೊ! ನಾನು ಪಾತೂ ಅಂದೆ; ಸೋತೆ! ಏನೇನು ಬೇಕೊ ಕೇಳು ಎಂದೆ; ಅವಳು ಕೇಳಿದಳು. ನಾನು ಹೇಳಿದೆ. ಮತ್ತೆ ಬಂದೆ. ಇಲ್ಲ—ಆ ಸೀತಾರಾಮುರಾಯರ ಹೆಂಡತಿ

ಅಲ್ಲಿಗೆ ಹೋಗಿ ಇಷ್ಟೆಲ್ಲ ಅನರ್ಥವಾಯಿತು. ಇಲ್ಲದಿದ್ದರೆ ನಾನು ಪಾರೂ ಎನ್ನುವಾಗ ಹಾರಿ ಬಾರೋ ಎನ್ನುತ್ತಿದ್ದಳೋ ಏನೋ! ಸೀತಾರಾಮರಾಯರ ಮನೆಗೆ ಹೋಗಿ ಅವರಿಗೆ ಅವರ ಹೆಂಡತಿಯ ವಿಷಯ ಸ್ವಲ್ಪ ಹೇಳಬೇಕು.

(ಸಗುಣೆಯ ಪ್ರವೇಶ.)

ನರ್ಸಿಂಗ: ಬಂದಳಯ್ಯಾ–ಟೆಲಿಗ್ರಾಫ್ ಪೇದೆ! ಎಷ್ಟು ಬೇಗ ಸುದ್ದಿ ಒಯ್ಯುತ್ತಾಳಪ್ಪ! ನಮಸ್ಕಾರ ಸಗ್ಣ ದೇವಿಯವರಿಗೆ! ಏನಾದರೂ ಟೆಲಿಗ್ರಾಂ ಇದೆಯೆ?

ಸಗುಣಾ: ಅಯ್ಯ! ಇದಕ್ಕೆ ಯಾವಾಗ ಜೀವಬಂತು? ಇದನ್ನು ಪಾರ್ವತಿ ಮುಗಿಸಿದ್ದಳೆಂದು ನಾನು ಭಾವಿಸಿದ್ದೆ! ಏನಯ್ಯಾ--ಯಾವ ಗ್ರಾಮ ಕೇಳಿದಿರಿ?

ನರ್ಸಿಂಗ: ಟೆಲಿಗ್ರಾಮು!

ಸಗುಣಾ: ನಿಮ್ಮಂಥ ಗ್ರಾಮಸಿಂಹಕ್ಕೆ ಟೆಲಿಗ್ರಾಮು ಯಾರು ಕಳಿಸೋದು? ನಿಮ್ಮ ಗ್ರಾಮವನ್ನೇ ಬಿಟ್ಟು ನೀವು ಓಡಿ ಬಂದಂತಿದೆ.

ನರ್ಸಿಂಗ: ಅಬಬಬಬ! ಎಲ್ಲಾ ಹೆಂಗಸರು ಕೂಡಿ ನನ್ನನ್ನು ಈ ದಿನ ತಿನ್ನೋದು ಅಂತ ಮಾಡಿವೆ! ಒಂದು ಮಾತು ಹೇಳುವುದರೊಳಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಉತ್ತರಕೊಡುತ್ತಾರೆ. ಯಾವ ಜಾತಿಯಪ್ಪ ಇದು! ಏ ಸಗ್ಣಾಬಾಯಿಯವರೇ, ಏನು, ನೀವು ಗಂಡಸರಿಗೆ ಹಾಗೆಲ್ಲ ಮಾತಾಡೋದು? ನಿಮ್ಮ ಗಂಡನ ಸ್ನೇಹಿತ ನಾನು!

ಸಗುಣಾ: ತಿಳಿದಿದೆ! ನಾನು ನಿಮ್ಮ ಹೆಂಡತಿಯ ಗೆಳತಿ!

ನರ್ಸಿಂಗ: ನನಗೆ ಗೊತ್ತಿದೆ. ನೀವು ಈ ದಿನ ಬಹಳ ಉಪಕಾರ ಮಾಡಿದ್ದಿರಿ. ಮುಂದೆ ನಿಮಗೆ ಏಳ್ಗೆಯಿದೆ—ಪುಣ್ಯವಿದೆ!

ಸಗುಣಾ: ನಿಮ್ಮ ಹೆಂಡತಿ ನನಗೆ ಅದಕ್ಕಿಂತ ಹೆಚ್ಚಿನ ಉಪಕಾರ ಮಾಡಿದ್ದಾಳೆ.

ನರ್ಸಿಂಗ: ಅಲ್ಲ—ನಿಮ್ಮ ಮನೆಯಲ್ಲಿ ನಡೆದುದನ್ನು ನಮ್ಮ ಮನೆಗೆ ಒಯ್ಯುವುದಕ್ಕೆ ನಿಮಗೇನು ಆತುರವಪ್ಪ! ಚಾಡಿ ಹೇಳೋದೆಂದರೆ ಅಷ್ಟು ಪ್ರೀತಿ ಹೆಂಗಸರಿಗೆ!

ಸಗುಣಾ: ನಡಿರಯ್ಯ—ನಿಮ್ಮಂಥ ಹೇಡಿಗಳಿಗೆ ನಮ್ಮೊಡನೆ ಮಾತಾಡುವ ಹವ್ಯಾಸವೇ ಬೇಡ! ಚಾಡಿ ಹೇಳಿದರೂ ಹೇಳದಿದ್ದರೂ ನಿಮ್ಮಂತಹ ಪುಕ್ಕರಿಗೆ ಸುಧಾರಣೆಯಿಲ್ಲ. ಸರಿಯಿರತ್ತ—ದಾರಿ ಬಿಡಿ!

ನರ್ಸಿಂಗ: ಹೋಯಿತು! ಎಲ್ಲ ಹೆಂಗಸರು ನನ್ನನ್ನು ಹೆದರಿಸುವುದು—ನಾನು ಹೆದರುವುದು! ನನ್ನ ಜನ್ಮವೇ ಹೀಗಾಯಿತು! ಗಂಡನಿಗೆ ಹೆದರುವ ಹುಳ ಕೂಡಾ ಈಗ ತಿರುಗಿ ನನ್ನನ್ನು ಕಚ್ಚುತ್ತಿದೆ!

ಸಗುಣಾ: ಹೆಂಡಂದಿರಿಗೆ ಹೆದರುವ ಪುರುಷರನ್ನು ನೋಡಿದರೆ ನನಗೆ ತಿರಸ್ಕಾರ.

ನರ್ಸಿಂಗ: (ನಿಟ್ಟುಸುರು ಬಿಡುತ್ತಾ)—ಗಂಡಂದಿರಿಗೆ ಹೆದರುವ ಹೆಂಗಳೆಯರನ್ನು ನೋಡಿದರೆ ನನಗೆ ನಾಚಿಕೆ!

ಸಗುಣಾ: ಆದರೆ, ಗಂಡನಿಗೆ ಹೆದರುವ ಹೆಂಡತಿ ಪರಪುರುಷನಿಗೆ ಹೆದರುವುದಿಲ್ಲ. ನಡಿಯಿರಿ ಇಲ್ಲಿಂದ! ಬಿಡಿ ದಾರಿ! ಇಲ್ಲದಿದ್ದರೆ ನಿಮ್ಮನ್ನು ಸೀಳಿ ಹೋಗಬೇಕಾದೀತು. (ಮುಂದುವರಿಯುವಳು. ಹಿಂದಿನಿಂದ ಸೀತಾರಾಮರಾಯರು ಬಂದು, ತಮ್ಮ ಹೆಂಡತಿಯನ್ನು ಹಿಡಿಯುವರು. ಅತ್ತ ಹಿಂದೆ ಸರಿಯುತ್ತಿದ್ದ ನರ್ಸಿಂಗರಾಯರನ್ನು ಪಾರ್ವತಿ ಬಂದು ಹಿಡಿದುಕೊಳ್ಳುವಳು.)

ಸೀತಾರಾಮ: ಸಗ್ಣಾ, ಏನಿದು ನಿನ್ನ ಅವತಾರ! ಸಾಕ್ಷಾತ್ ಮಹಿಷಾಸುರ ಮರ್ಧಿನಿಯಂತೆ ಕಾಣುತ್ತಾಳಯ್ಯ! ನಿನ್ನಾಣೆ, ಸಗ್ಣಾ—ನನ್ನ ಜನ್ಮದಲ್ಲಿ ನಿನ್ನ ತೇಜವನ್ನು ಕಂಡುದು ನಾನು ಈ ದಿನ! ನನ್ನನ್ನು ನೋಡಿದರೆ ಹೇಗೆ ಹೆದರುತ್ತಿದ್ದಳು! ಈಗ ನರ್ಸಿಂಗರಾಯರ ಒಪರೇಶನ್ ಮಾಡುವಳಂತೆ! ಅಭ!

ಪಾರ್ವತಿ: (ತನ್ನ ಗಂಡನನ್ನುದ್ದೇಶಿಸಿ)—ಏನು, ಸಿಂಗ ಹೆದರಿತೇ? ನಿಮ್ಮ ಜನ್ಮವೇ ಹೆಂಗುಸರನ್ನು ನೋಡಿ ಹೆದರಲಿಕ್ಕಾಯಿತು! (ಸೀತಾರಾಮಯ್ಯನವರನ್ನು ನೋಡಿ)—ಏನು ಶೀತಳರಾಯರು? ಟೈಮ್ ಟೇಬಲ್ ಪ್ರಕಾರ ಪ್ರೀತಿ ಮಾಡುವವರು? ನಿಮ್ಮ ಕಾರ್ಖಾನೆಯಲ್ಲಿ ನಮ್ಮ ಸಿಂಗರಿಗೆ ರಣಜಿತಸಿಂಗ ಮಾಡಲು ಸಾಧ್ಯವಾಗಲಿಲ್ಲವೆ?

ಸೀತಾರಾಮ: (ಕೋಪದಿಂದ)—ಪಾರ್ವತ್ಯಮ್ಮನವರೇ! ನಿಮ್ಮ ಗಂಡನೊಡನೆ ಮಾತಾನಾಡುವ ವೈಖರಿಯಲ್ಲಿ ನನ್ನೊಡನೆ ಮಾತಾಡಬೇಡಿ! ನೀವು ಎಷ್ಟಾದರೂ ಹೆಂಗಸು!

ನರ್ಸಿಂಗ: (ತನ್ನ ಹೆಂಡತಿಗೆ) ಬೇಡ ಪಾರೂ—ಅವರೊಡನೆ ಮಾತಾಡಬೇಡ. ಅವರು ಜೋರಿನ ಮನುಷ್ಯ—ಅವರ ಹೆಂಡತಿಯೂ ಜೋರು!

ನಡಿ, ಮನೆಗೆ ಹೋಗೋಣ! ಸಾಕಿಷ್ಟು! ಈ ದೇಶವೇ ಕೆಟ್ಟದೆಯೋ ಏನೋ! ಇಲ್ಲಿ ವಿಮಾನ—ಬೋಂಬು—ಮೆಗ್ನೇಟಿಕ್ ಮಾಯ್ನ್‌ಗಳ ಭಯವಿಲ್ಲ—ಹೆಂಗಸರದೇ ಭಯ! ಹುಲಿ, ಕರಡಿಗೆ, ಹೆದರುವುದಿಲ್ಲ;— ಈ ಹೆಂಗಸರಿಗೆ ನೋಡಿ ಸಾಯೋಕಾಲ! ಅವರು ಹೀಗೆ ನೋಡಿದರೆ ಸಾಕು—ನರಗಳೆಲ್ಲ ಪಟ್ ಪಟ್ ಎನ್ನುತ್ತವೆ.

ಪಾರ್ವತಿ: ಸೀತಾರಾಮರಾಯರಂತೆ ನೀವು! ಸೀತೆಗೆ ಹೆದರಿಸೋದು ಬೇರೆ—ನಿಮ್ಮ ಸ್ನೇಹಿತರಿಗೂ ಅವರವರ ಹೆಂಡಂದಿರನ್ನು ಬೆದರಿಸಬೇಕೆಂದು ಹೇಳಿಕೊಡುವುದು ಬೇರೆ! ಒಳ್ಳೆ ಮನುಷ್ಯ!

ಸೀತಾರಾಮ: ಸಾಕುಮಾಡಿರಿ ನಿಮ್ಮ ಉಪದೇಶ. (ತನ್ನ ಹೆಂಡತಿಗೆ) ಸುಗುಣಾ, ಈ ಹೆಂಗಸು ನಿನಗೇನೆಲ್ಲ ಹೇಳಿಕೊಟ್ಟಳು? (ಪಾರ್ವತಿಗೆ)–ನಡಿಯಿರಿ ಮನೆಗೆ—ನಿಮ್ಮ ಸಿಂಗನನ್ನು ಹಿಡಕೊಂಡು! ಮುತ್ತಿನಂತಾ ನನ್ನ ಹೆಂಡತಿಗೆ ಗಂಡನ ಮೇಲೆ ದಂಗೆಯೇಳಲು ಕಲಿಸಿಕೊಟ್ಟ ಪುಣ್ಯವಂತೆ ನೀವು!

ನರ್ಸಿಂಗ: ಬೇಜಾರು ಪಡಬೇಡಿ ನೀವು. ನನ್ನ ಹೆಂಡತಿಯ ಕ್ರಮ ನಿಮಗೆ ಮೊದಲೇ ಗೊತ್ತು! ಮಾಡಿದೆ ನಾನು ಐದೈದು ನಿಮಿಷ ಎಲ್ಲ ಕರ್ಮ! ಹದಿನಾರನೇ ನಿಮಿಷಕ್ಕೆ ನಾನು ತಟ್ಟನೆ ಹೊರಗೆ, ಅವಳು ಒಳಗೆ!

ಸೀತಾರಾಮ: ನಿಮ್ಮ ಹೆಂಡತಿಯ ಆಕಾರ ಸ್ವಲ್ಪ ದೊಡ್ಡದಯ್ಯ! ಇವರೆಲ್ಲ ಜರ್ಮನಿ—ರಷ್ಯ ಮೊದಲಾದ ಕಡೆಗಳಲ್ಲಿ ಪೋಲೀಸರಾಗುವ ಜಾತಿ ನರ್ಸಿಂಗರಾಯರೇ! (ಪಾರ್ವತಿಯು ಉಸಿರೆತ್ತದೆ, ಕೋಪದಿಂದ ಕುತ್ತಿಗೆ ತಿರುವುವಳು.)

ನರ್ಸಿಂಗ: (ಸೀತಾರಾಮರಾಯರ ಕಿವಿಯಲ್ಲಿ) ಸಬ್ ಇನ್ಸ್‌ಪೆಕ್ಟರ್ ಆದರೂ ಚಿಂತಿಲ್ಲ. ಮೆಲ್ಲಗೆ ಮಾತಾಡಿರಿ. ಒಂದು ಮಾತು, ಸೀತಾರಾಮರಾಯರೇ! ಇನ್ನು ನನಗೆ ಏನೇನೂ ಹೇಳಿಕೊಡಬೇಡಿ. ನನಗೆ ಐದು ನಿಮಿಷವಾಗಲಿ ಅರ್ಧ ನಿಮಿಷವಾಗಲಿ ಪ್ರೇಮಮಾಡಲೂ ಬರೋದಿಲ್ಲ—ಕರುಣೆಯೂ ಬರೋದಿಲ್ಲ. ಕೋಪ ಎಂಬುದು ನನ್ನ ಜಾತಕದಲ್ಲೇ ಇಲ್ಲ. ನಾನೊಂದು ಜಾತಿಯೇ ಬೇರೆ. ನಾನು ಇರೋದೇ ಹೀಗೆ ಇನ್ನು!

ಸೀತಾರಾಮ: ನಿಜ! ನನಗೊಂದು ಪಾಠವಾಯಿತಿದು. ಇದನ್ನು, ವಿಜ್ಞಾನದಲ್ಲಿ ಹೊಸ ಶೋಧವೆಂದರೂ ಸರಿ ಹೋಗುತ್ತದೆ. ಅವರವರ

ವ್ಯಕ್ತಿತ್ವವನ್ನು ಯಾರಿಂದಲೂ ನಾಶಮಾಡಲಾಗುವುದಿಲ್ಲ. ಅಜನ್ಮ ಹೇಡಿಗಳಿಗೆ ಕೃತಕ ಧೈರ್ಯವನ್ನು ತುಂಬಿದರೂ, ಧೈರ್ಯವಂತರನ್ನು ಅಧೀರಗೊಳಿಸ ಯತ್ನಿಸಿದರೂ ಪ್ರಯೋಜನವಿಲ್ಲ. ಕಟ್ಟಿಕೊಟ್ಟ ಬುತ್ತಿಯಂತಾಗುವುದು.

ನರ್ಸಿಂಗ: ನಿಜ; ಸಾವಿರ ಮಾತಿಗೂ ನಿಜ! ಪಾರ್ವತಿ ಇನ್ನು ನಾವು ಮನೆಗೆ ಹೋಗಬಹುದಷ್ಟೆ?

ಪಾರ್ವತಿ: ಮತ್ತೇನು ಮಾಡುವುದು? ಹೆಂಡತಿಗೆ ಗಂಡನಿಗಿಂತ ದೊಡ್ಡ ವಸ್ತುವಿದೆಯೇ?

ನರ್ಸಿಂಗ: (ಹೆಂಡತಿಯ ದೊಡ್ಡ ದೇಹವನ್ನು ನೋಡಿ)—ಇಲ್ಲಪ್ಪಾ ಇಲ್ಲ. ಸೀತಾರಾಮರಾಯರೇ, ಹುಶಾರಯ್ಯ ನಿಮ್ಮ ಹೆಂಡತಿ. ನಿಮಗೆ ಹೆದರುತ್ತಾಳೆ, ಊರಿಗೆ ಹೆದರುವುದಿಲ್ಲ. ನನ್ನ ಹೆಂಡತಿ ನನಗೆ ಹೆದರುವುದಿಲ್ಲ; ಊರಿಗೆ ಹೆದರುತ್ತಾಳೆ. ಈ ಎರಡು ಜಾತಿಯೇ ಬೇರೆ. ಇವರಿಬ್ಬರೂ ಒಟ್ಟಾದರೆ ಒಟ್ಟು ಅನರ್ಥ, ಏನು ಹೇಳುತ್ತೀರಿ?

ಸೀತಾರಾಮ: ಇವರಿವರು ದೂರವಿದ್ದಷ್ಟು ಕ್ಷೇಮ.

ನರ್ಸಿಂಗ: ಈಗ, ನೀವು ನಿಮ್ಮ ಹೆಂಡತಿಗೆ ಹೆದರುವುದಿಲ್ಲ. ಊರಿನ ಇತರ ಹೆಂಗಳೆಯರಿಗೂ ಹೆದರುವುದಿಲ್ಲ ನಾನು ಈ ಪಾರ್ವತಿಗೂ ಹೆದರುತ್ತೇನೆ, ಸಣ್ಣ ಬಾಯಿಗೂ ಹೆದರುತ್ತೇನೆ. ಇನ್ನ್ಯಾರಾದರೂ ಬಂದರೆ ಅವರಿಗೂ ಹೆದರುತ್ತೇನೆ. ನಮ್ಮ—ನಮ್ಮ ಜಾತಿ ಬೇರೆ. ನಾವು ಒಟ್ಟಾದರೆ ಚಿಂತಿಲ್ಲ, ಪ್ರೇಮ—ಕರುಣೆ—ಕೋಪ ಐದೈದು ನಿಮಿಷ ಇರಬಾರದು—ಲೆಕ್ಕ ತಪ್ಪುತ್ತದೆ.—ಏನು ಹೇಳುತ್ತೀರಿ?

ಸೀತಾರಾಮ: ಇದು ಕೂಡಾ ವಿಜ್ಞಾನವೇ! ಯಾವುದೂ ವಿಜ್ಞಾನ ಬಿಟ್ಟು ಇಲ್ಲ. ನಿಮಗೆ ದೇವರೇ ಹೊಸತೊಂದು ಬುದ್ಧಿ ಕೊಟ್ಟಿದ್ದಾನೆ.

ನರ್ಸಿಂಗ: ಅಥವಾ ಜ್ಞಾನವನ್ನು ಬಿಟ್ಟು ಇಲ್ಲವೆಂದರೂ ಸರಿ!—ಹೋಗುತ್ತೇನೆ,--ಜೈ ಸೀತಾರಾಮ್!

ಸೀತಾರಾಮ: ನಮಸ್ಕಾರ!—(ತೆರೆ ಬೀಳುವುದು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾಗುವ ಕೆಲವು ವಿಷಯಗಳು

ಸಣ್ಣ ಕತೆಗಳು	ಪ್ರಹಸನಗಳು
ನೀಳ್ಗತೆಗಳು	ಏಕಾಂಕ ನಾಟಕಗಳು
ವ್ಯಕ್ತಿ ಚಿತ್ರ	ದೇಶ-ವಿದೇಶ ಚರಿತ್ರೆ
ವಿಜ್ಞಾನ	ಚಿಕ್ಕ ನಿಘಂಟುಗಳು
ಶಿಲ್ಪ	ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳ ಉಪದೇಶ
ಲಲಿತಕಲೆ	ಸೃಷ್ಟಿಯ ವೈಚಿತ್ರ್ಯಗಳು
ಗೃಹವೈದ್ಯ	ಶೈಕ್ಷಣಿಕ ವಿಚಾರಗಳು
ಗೃಹಿಣಿಯರಿಗೆ	ಕ್ಷೇತ್ರಗಳ ವಿವರ
ಉಪಯುಕ್ತ ಸಲಹೆಗಳು	
ಸುಭಾಷಿತ	ವಾಙ್ಮಯ ವಿಚಾರ
ಪ್ರಯಾಣ ಕತೆಗಳು	ಸತ್ಯ ಕಥಾನಕಗಳು

ಶ್ರೀ| ಕೋ. ಶ. ಕಾರಂತ, ಬಿ.ಎ., ಬಿ.ಎಲ್., ಶ್ರೀ| ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್., ಎಡ್ವೊಕೇಟ್, ವೈದ್ಯಗುರು ಎಂ. ಆರ್. ಭಟ್, ದಿ| ಎಮ್. ಎನ್. ಕಾಮತ್, ಶ್ರೀ| ಪಿ. ಎಸ್. ವೆಂಕಟಕೃಷ್ಣ ರಾವ್, ಎಂ.ಎ., ಬಿ.ಟಿ, ಶ್ರೀ| ಎಮ್. ಸುಬ್ರಾಯನ್, ವಿದ್ವಾನ್, ಶ್ರೀ| ಕುಡ್ವ ವಾಸುದೇವ ಶೆಣೈ, ಶ್ರೀ| ಎಲ್. ಎಸ್. ನಾಯಕ, ಡಾ| ಎಸ್. ಪಿ. ಭಟ್— ಮೊದಲಾದವರ|ಲೇಖನಗಳು 'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾಗುವುವು.

ಕೆಲವು ಪ್ರಕಟಣೆಗಳು 32, 40, 48 ಅಥವಾ ಹೆಚ್ಚು ಪುಟಗಳಿರುವುವು. ಆದರೆ, ಯಾವ ಪ್ರಕಟಣೆಯೂ ಹದಿನಾರು ಪುಟಗಳಿಗಿಂತ ಕಡಿಮೆ ಇರುವುದಿಲ್ಲ.

ಒಂದಾಣೆ ಮಾಲೆ,

ಪ್ರಭಾತ ಆಫೀಸು, ರಥಬೀದಿ, ಮಂಗಳೂರು—೧.

Edited, Printed and Published by K. V. Shenoy
at The Prabhat Printers, Ltd., Mangalore-1.